Sri H. V. KOUJALGI.—The procedure suggested by the hon. Member is not practical. If the person concerned is aggrieved, he could have it remedied in appeal.

Sri KESHAV RAO NITTURKAR.—Will the Government consider the suggestion that the first appeal may lie to the Tahsildar and not to the A. C. ?

Sri H. V. KOUJALGI.—No, Sir. I have already stated that more than one Officer is required to certify the entries and one appellate authority is quite sufficient. From practical experience it has been found that the present arrangement is quite correct.

Water supply scheme to Davangere City

230. Sri A. H. SHIVANANDASWAMY (Elected by L.A.).—

Will the Minister of State for Municipal Administration be pleased to state ;—

(*a*) when the comprehensive water supply scheme was proposed and sanctioned for Davangere City ;

(*b*) when it was revised and for the revised amount ;

(*c*) when it will be completed ;

Sri B. M. PATIL (Minister of State for Municipal Administration).—

(*a*) (i) The original scheme was proposed in the year 1957 ;

(ii) It was sanctioned in the year 1968.

(*b*) It was revised in the year 1968 and the revised amount is Rs. 49.00 lakhs.

(*c*) The revised scheme is being approved by Government. As such it is not possible to state the exact period by which it will be completed ?

ಶ್ರೀ ಜಿ. ವಿ. ಅಂಜನಪ್ಪ.—ಈ ಎಸ್ಟಿಮೇಟ್‌ನ್ನು ಮಂಜೂರು ಮಾಡಲಿಕ್ಕೆ ಹತ್ತು ವರ್ಷಗಳ ಕಾಲ ಏಕೆ ಬೇಕಾಯಿತು ?

† ಶ್ರೀ ಬಿ. ಎಂ. ಪಾಟೀಲ್.—ಮೊದಲು ಗವರ್ನಮೆಂಟ್ ಆಫ್ ಇಂಡಿಯಾದವರು ಮಾಡಬೇಕು, ಅವರಿಂದ ಹಣ ಪಡೆಯಬೇಕೆಂದು ವಿಚಾರ ಮಾಡಲಾಗಿತ್ತು. ಅವರಿಂದ ಹಣ ಸಿಕ್ಕಲಿಲ್ಲ ವಿಳಂಬವಾಯಿತು. ಅದಾದಮೇಲೆ ಲೈಫ್ ಇನ್ಷ್ಯೂರನ್ಸ್ ಕಾರ್ಪೋರೇಷನ್‌ಗೆ ಬರೆಯಬೇಕಾಯಿತು. ಈ ರೀತಿಯಿಂದ ನಗರ ಪಾಲಿಕೆ ಆರ್ಥಿಕ ಸ್ಥಿತಿ ಮತ್ತು ಡಿವಿಜನಲ್ ಕಮೀಷನರ ರಿಪೋರ್ಟ್ ಇವನ್ನು ವಿಚಾರ ಮಾಡುವುದಕ್ಕೆ ಇಷ್ಟು ವೇಳೆ ಹಿಡಿಯಿತು.

ಶ್ರೀ ಜಿ. ವಿ. ಅಂಜನಪ್ಪ.—ಮೊದಲು ಮಾಡಿದ್ದು ಅಂದಾಜೆಷ್ಟು ? ಇತ್ತೀಚೆಗೆ ರೆವೈಜ್ ಮಾಡಿದ ಅಂದಾಜು ಎಷ್ಟು ?

ಶ್ರೀ ಬಿ. ಎಂ. ಪಾಟೀಲ್.—1961ರಲ್ಲಿ ಮಾಡಿದ್ದ ಅಂದಾಜು 32 ಲಕ್ಷ ರೂಪಾಯಿಗಳು. ಇತ್ತೀಚೆಗೆ ರಿವೈಜಾದ ಅಂದಾಜು 49 ಲಕ್ಷ ರೂಪಾಯಿಗಳು.

ಶ್ರೀ ಜಿ. ಎ. ಅಂಜನಪ್ಪ.—1967ರಲ್ಲಿ ಮೊಟ್ಟಮೊದಲಿಗೆ ಮಾಡಿದ್ದ ಅಂದಾಜೆಷ್ಟು ?

ಶ್ರೀ ಬಿ. ಎಂ. ಪಾಟೀಲ್.—ಆ ವಿವರಗಳು ಈಗ ನನ್ನಲ್ಲಿಲ್ಲ.

ಶ್ರೀ ಜಿ. ಎ. ಅಂಜನಪ್ಪ.—ಮೊದಲು 32 ಲಕ್ಷಕ್ಕೆ ಅಂದಾಜಾಗಿದ್ದದ್ದು 49 ಲಕ್ಷಕ್ಕೆ ಏರಲು ಕಾರಣಗಳೇನು ?

ಶ್ರೀ ಬಿ. ಎಂ. ಪಾಟೀಲ್.—ಅದಕ್ಕೇನು ಕಾರಣಗಳು ಎಂಬುದನ್ನು ವಿವರವಾಗಿ ಚೀಫ್ ಇಂಜಿನಿಯರವರ ವರದಿಯಲ್ಲಿ ನಮೂದಿಸಿದೆ. ಅದು ಬಹಳ ದೊಡ್ಡ ವರದಿ. ಅದನ್ನು ಓದಲೇ ಬೇಕೆಂದರೆ ಓದುತ್ತೇನೆ. ಮುಖ್ಯವಾಗಿ ಅಂದಾಜು ಹೆಚ್ಚುವುದಕ್ಕೆ ಕಾರಣವೇನೆಂದರೆ ಮೊದಲಿನ ಸ್ಕೀಮಿನ ಪ್ರಕಾರ ನೀರನ್ನು ಭದ್ರಾರಿಜರ್ವಾಯರ್ ಮೂಲಕ ತೆಗೆದುಕೊಳ್ಳಬೇಕೆಂದಿತ್ತು. ಅದನ್ನು ಈಗ ಬದಲಾವಣೆ ಮಾಡಿ ಭದ್ರಾ ಹೈಲೆವಲ್ ಕೆನಾಲಿನಿಂದ ತೆಗೆದುಕೊಳ್ಳಬೇಕೆಂದು ಸ್ಕೀಮಾಗಿದೆ. ಇದರಿಂದ ಅದು ಹೆಚ್ಚಾಗಿದೆ.

ಶ್ರೀ ಜಿ. ಎ. ಅಂಜನಪ್ಪ.—ಇದನ್ನು ಪೂರ್ಣಗೊಳಿಸುವುದಕ್ಕೆ ಇನ್ನೂ ಎಷ್ಟು ವರ್ಷಗಳ ಕಾಲ ಬೇಕು ?

ಶ್ರೀ ಬಿ. ಎಂ. ಪಾಟೀಲ್.—ಬಹಳ ವೇಳೆ ಬೇಕಾಗಿಲ್ಲ. ಇನ್ನು ಎರಡು ವರ್ಷಗಳೊಳಗೇ ಮಾಡಲಾಗುತ್ತದೆ.

Mr. DEPUTY CHAIRMAN.—Question Hour is over.

3-30 P.M.

Supply of rice to the MICO Employees Consumers' Co-operative Society

ಶ್ರೀ ವೈ. ಎಸ್. ಪಾಟೀಲ್ (ಪದವೀಧರರ ಕ್ಷೇತ್ರ).—ಮೈಕೋ ವರ್ಕರ್ಸ್ ಕನ್ಸ್ಯೂಮರ್ಸ್ ಕೋ-ಆಪರೇಟಿವ್ ಸೊಸೈಟಿಯವರಿಗೆ ಬೆಂಗಳೂರು ಡಿಸ್ಟ್ರಿಕ್ಟ್ ಸೆಂಟ್ರಲ್ ಕೋ-ಆಪರೇಟಿವ್ ಸೊಸೈಟಿ ಅವರು ಕೂಟ್ಟರತಕ್ಕ ಅಕ್ಕಿಯಲ್ಲಿ ಕಲ್ಲು, ಧೂಳು, ಹುಳ ಎಲ್ಲ ತುಂಬಿಕೊಂಡಿದೆ. ಅದು ಜನರು ಬಳಸುವುದಕ್ಕೆ ಯೋಗ್ಯವಾಗಿಲ್ಲ. ಅದನ್ನು ಜನರು ತಿಂದರೆ ಈ ರೋಗದವ್ಲೇ ಇರುತ್ತಾರೋ ಅಥವಾ ಪರಲೋಕಕ್ಕೆ ಯಾತ್ರೆ ಮಾಡುತ್ತಾರೋ ಅನ್ನುವ ಭಯ ಉಂಟಾಗಿದೆ. ಕೂಡಲೇ ಸರ್ಕಾರದವರು ಇದನ್ನು ವಿಚಾರಣೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಆ ಅಕ್ಕಿಯ ಸ್ಯಾಂಪಲನ್ನು ತಮ್ಮ ಮೂಲಕ ಸರ್ಕಾರಕ್ಕೆ ಕೊಡುತ್ತೇನೆ.

Taking up the notice of adjournment motion *re:* the affairs of Bangalore University

†ಶ್ರೀ ಜಿ. ಎ. ಅಂಜನಪ್ಪ.—ಅಧ್ಯಕ್ಷರೇ, ನಾನು ತಮ್ಮ ಗಮನಕ್ಕೆ ಒಂದು ಬಹಳ ಪ್ರಾಮುಖ್ಯವಾದ ವಿಷಯವನ್ನು ತರಬಯಸುತ್ತೇನೆ. ಅದು ಬಹಳ ಗಹನವಾದ ವಿಷಯ. ನಾನು ಈ ವಿಚಾರವನ್ನು ಇಲ್ಲಿ ಚರ್ಚೆ ಮಾಡಬೇಕೆಂದು 3-4 ದಿನಗಳಿಂದಲೂ ಪ್ರಯತ್ನ ಮಾಡುತ್ತಿದ್ದೇನೆ. ಸಾಧ್ಯವಾಗಿಲ್ಲ. ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಕಳೆದ 6 ದಿವಸಗಳಿಂದಲೂ ಗಂಗರಾಜ್ ಎನ್ನತಕ್ಕ ವಿದ್ಯಾರ್ಥಿ ಉಪವಾಸ ಮಾಡುತ್ತಿದ್ದಾನೆ. ಈ ದಿವಸ ಅವನ ದೇಹಪರಿಸ್ಥಿತಿ ಬಹಳ ವಿಷಮಿಸಿದೆ. ಪರಿಸ್ಥಿತಿ ತೀರ ಹದಗೆಡತಕ್ಕ ಮಟ್ಟಕ್ಕೆ ವಿಷಯವನ್ನು ಬಿಡಬಾರದೆಂದು ನಾನು ಈ ದಿವಸ ಒಂದು ಗಂಟೆಯಲ್ಲಿ ಕೂಡ ಅಲ್ಲೇ ಇದ್ದೆ. ಸುಮಾರು ಅಲ್ಲಿ 20 ಸಾವಿರ ವಿದ್ಯಾರ್ಥಿಗಳು ಗುಂಪು ಸೇರಿದ್ದಾರೆ. ಆದಾಗ್ಯೂ ಅವರು ಯಾವ ಒಂದು ಹೀನ ಕೃತ್ಯಕ್ಕೂ ಕೈಹಾಕದೆ ಬಹಳ ಶಾಂತರೀತಿಯಿಂದ ವರ್ತಿಸುತ್ತಿದ್ದಾರೆ. ಮಾನ್ಯ ವಿದ್ಯಾಸಚಿವರು ಅಲ್ಲಿ ಈ ದಿವಸ ವಿದ್ಯಾರ್ಥಿಗಳನ್ನು ಕುರಿತು ಭಾಷಣಮಾಡಿದರು. ಆದರೆ ಅವರ ಭಾಷಣದಲ್ಲಿ ಅದೇ ಹಳೆ ಪಲ್ಲವಿಯನ್ನು ಹಾಡಿದ್ದರಿಂದ ಅದು ವಿದ್ಯಾರ್ಥಿಗಳಿಗೆ ಸೊಗಸಲಿಲ್ಲ. ಅಲ್ಲಿ ಇಂಥ ಒಂದು